**ಓ.ಎಸ್.ಸಂ. 428/2013 ಡಿಡಬ್ಲೂ.1**

<u>ದಿನಾಂಕ **14-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ವಾದಿ ಪರ ವಕೀಲರಿಂದಃ</u>

1. ನಾನು 2001 ರಲ್ಲಿ ಡಿಪ್ಲೂಮಾ ಇನ Automobile Engineering ಕಲಿತಿದಿದ್ದೇನೆ. ಈ ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತಿದ್ದೆ. ಈ ದಾವೆಯನ್ನು ಒಂದು ಸುಳ್ಳು ಉಯಿಲು ಪತ್ರ ತಯಾರಿಸಿ ಪಾಲು ಕೇಳಿ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿಪ್ರತಿವಾದ ಪತ್ರ ಸಲ್ಲಿಸಲು ನನ್ನ ತಂದೆ ಹಾಗೂ ತಾಯಿ ಮಾಹಿತಿ ಕೊಟ್ಟಿರುತ್ತಾರೆ.

2. ದಾವಾ ಆಸ್ತಿ ಮೊದಲು ಮಾಹದೇವ ಮಾಲಗಾರ ಎನ್ನುವವರಗೆ ಸೇರಿದ್ದು ಎಂದರೆ ಸರಿ . ಅವರ ಹೆಂಡತಿ ಸುಶೀಲಾ ಎಂದರೆ ಸರಿ . ಅವರಿಗೆ 2 ಜನ ಮಕ್ಕಳು ಎಂದರೆ ಸರಿಯಲ್ಲ . ಅವರಿಗೆ 3 ಜನ ಮಕ್ಕಳು. ಅವರು ಹೆಸರು ತಾರಾಬಾಯಿ , ಹಾಗೂ ಲಕ್ಷಣ ಎಂದರೆ ಸಾಕ್ಷಿ ಮತ್ತೊಬ್ಬ ರಾಮ ಎನ್ನುವ ಮಗ ಇದ್ದಾನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಮಾಹದೇವ ಮಾಲಗಾರ ರವರಗೆ ಮೂರು ಜನ ಮಕ್ಕಳ ಇರುವ ಬಗ್ಗೆ ವಾರಸ ಪ್ರಮಾಣ ಪತ್ರವನ್ನು ನಾನು ಹಾಜರು ಪಡಿಸಿಲ್ಲ. ಮಾಹಾದೇವ ರವರಗೆ ಮೂರು ಜನ ಮಕ್ಕಳು ಇದ್ದಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಮಹಾದೇವ ರವರಗೆ ಮೂರು ಜನ ಮಕ್ಕಳು ಇರುವ ಬಗ್ಗೆ ನಾನು ದಾಖಲೆ ಹಾಜರು ಪಡಿಸಿದ್ದೇನೆ.

3. ಮಹಾದೇವ ಮರಣ ನಂತರ ಸುಶೀಲಾ ಮತ್ತು ಲಕ್ಷಣ ಮತ್ತು ತಾರಾಬಾಯಿ ನಡುವೆ ಸಂಬಂದ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ . ಆ ಕಾರಣದಿಂದ ಸುಶೀಲಾ ರವರು ಓಸ ನಂಬರ 113/2008 ರಂತೆ ಮಾನ್ಯ ಪ್ರಧಾನ ದಿವಾಣಿ ನ್ಯಾಯಲಯ ಚಿಕ್ಕೋಡಿಯಲ್ಲಿ ದಾವೆ ದಾಖಲೆಸಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ತಾರಾಬಾಯಿ 1 ನೇ ಪ್ರತಿವಾದಿ, ರಾಮಚಂದ್ರ 2 ನೇ ಪ್ರತಿವಾದಿ , ಮತ್ತು 3 ನೇ ಪ್ರತಿವಾದಿಯಾಗಿ ಲಕ್ಷಣ ಇದ್ದರು ಎಂದರೆ ಸರಿ . ಸದರಿ ದಾವಾಯಲ್ಲಿನ ಆದೇಶ ದ ಮೇಲೆ ನಿಪಿ 5 ರಂತೆ ಮೇಲ್ಮನಿವಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ಮೇಲ್ಮನಿವಿ ಭಾಗಶ ಪುರಸ್ಕಾರಗೊಂಡಿದ್ದು ಎಂದರೆ ಸರಿ . ಸುಶೀಲಾರವರು ಎಫ ಡಿ ಪಿ 12/2011 ಸಲ್ಲಿಸಿದ್ದಾರೆ ಎಂದರೆ ಸರಿ . ಸದರಿ ಎಫ ಡಿ ಪಿ 13-03-2013 ರಂದು ನಿಕಾಲೆ ಆಗಿದೆ ಎಂದರೆ ಸರಿ . ಸುಶೀಲಾ ಹಾಗೂ ಲಕ್ಷಣ ಹಾಗೂ ತಾರಾಬಾಯಿ ನಡುವೆ ಸಂಬಂದ ಚೆನ್ನಾಗಿ ಇರದೆ ಇರುವುದು ಮೇಲಿನ ಪ್ರಕರಣ ಸಲ್ಲಿಸಲು ಕಾರಣ ಎಂದರೆ ಸರಿಯಲ್ಲ . ಆ ರೀತಿ ನಾನು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

**(ಅಶೋಕ ಆರ್ ಎಚ್)**
**1** ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ**,** ಚಿಕ್ಕೋಡಿ.